ಶ್ರೀ ಮಹಮದ್ ಮೊಯಿನುದ್ದೀನ್.—ಅಧ್ಯಕ್ಷರೇ, ವಿಐಎಸ್ಎಲ್‌ಗೆ ವರ್ಷಕ್ಕೆ ಬೇಕಾಗಿರುವುದು ೧,೩೦,೦೦೦ ಮೆಟ್ರಿಕ್ ಟನ್ ಕಬ್ಬಿಣದ ಅದಿರು. ಆದರೆ ಇಲ್ಲಿ ಸಪ್ಲೈ ಆಗಿರುವುದು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಾ ಬಂದಿದೆ. ಬ್ಯಾಲೆನ್ಸ್ ಪೋರ್ ಏನು ಮಾಡುತ್ತೀರಿ ? Is it under production ? What is the arrangement that you have made to get the balance of the ore ? Is it running below the production capacity ?

ಶ್ರೀ ಜೆ. ಹೆಚ್. ಪಟೇಲ್.—ಅದಕ್ಕಿರುವ ಸಾಮರ್ಥ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿ ಉತ್ಪಾದನೆ ಮಾಡುತ್ತಿದೆ. ಬೇರೆ ಯಾವುದೇ ವ್ಯವಸ್ಥೆ ಮಾಡಿಲ್ಲ. It is being run below the capacity. No other arrangement is being done.

ಶ್ರೀ ಮಹಮದ್ ಮೊಯಿನುದ್ದೀನ್.—ತಮಗೆ ಗೊತ್ತಿದೆ. ಎನ್‌ಎಂಡಿಸಿ ಪೋರ್ ಏನಿದೆ ಅದು ಇದಕ್ಕೆ ತಗಲುತ್ತಿರುವ ಬೆಲೆಗಿಂತ ಕಡಿಮೆ ಇದೆ. ಆದ್ದರಿಂದ ಎನ್‌ಎಂಡಿಸಿಯಿಂದ ೫-೬ ರೂ. ಕಡಿಮೆಗೆ ಏಕೆ ಖರೀದಿಸಿ ಹತ್ತು ಹದಿನೈದು ಲಕ್ಷ ಸೇವ್ ಮಾಡಬಾರದು ?

ಶ್ರೀ ಜೆ. ಹೆಚ್. ಪಟೇಲ್.— ಮುಖ್ಯ ಕಾರಣ ವಿದ್ಯುತ್ ಕಡಿತ ಇರುವುದರಿಂದ ಕೆಲಸ ನಿಧಾನವಾಗಿದೆ ಸದಸ್ಯರು ಕೊಟ್ಟಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ವಿದ್ಯುತ್ ಸರಬರಾಜು ಹೆಚ್ಚಾದಾಗ ಸಲಹೆಯನ್ನು ಜಾರಿಗೆ ಕೊಡುತ್ತೇನೆ.

ಶ್ರೀ ಹೆಚ್. ಬಿ. ದ್ಯಾವರಪ್ಪ.— ನಿಮ್ಮ ಉತ್ತರದಲ್ಲಿ ಕ್ರಮ ತೆಗೆದುಕೊಂಡಿದ್ದೇನೆ ಸಿಕ್ಕಿಹಾಕಿಕೊಂಡು ಸಸ್‌ಪೆಂಡ್ ಮಾಡಿಸುತ್ತೇನೆ. ಪರವಾನಿಗೆಯನ್ನೇ ಕ್ಯಾನ್ಸಲ್ ಮಾಡಿಸಿದ್ದೇನೆಂದು ಹೇಳಿದ್ದೀರಿ ? ಆದರೆ ದಿನನಿತ್ಯ ಕಣ್ಣಿಗೆ ಹೊಡೆಯುವಂತೆ ಇದೆಲ್ಲ ನಡೆಯುತ್ತಲೇ ಇದೆ ಇದುವರೆಗೂ ಎಷ್ಟು ಜನಗಳ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ. ಪರ್ಮಿಟ್ ರದ್ದು ಎಷ್ಟು ಮಾಡಿದ್ದೀರಿ, ಅಂಕಿ ಅಂಶ ಇದೆಯೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಂಕಿ ಅಂಶ ಇದೆ ಸ್ವಾಮಿ. ಈ ವರ್ಷದಲ್ಲಿ ೨೦೨ ಕೇಸ್‌ಗಳನ್ನು ಬುಕ್ ಮಾಡಿದೆ, ಒಂದು ಪರ್ಮಿಟ್ ಸಸ್ಪೆಂಡ್ ಮಾಡಿದೆ. ಸುಮಾರು ೮೦ ಸಾವಿರ ರೂ.ಗಳನ್ನು ಫೈನ್‌ನಲ್ಲಿ ಕಲೆಕ್ಟ್ ಮಾಡಿದ್ದೇನೆ.

ಶ್ರೀ ಹೆಚ್. ಬಿ. ದ್ಯಾವರಪ್ಪ.—ಪರ್ಮಿಟ್ ಇಲ್ಲದೇ ಬಸ್ಸುಗಳನ್ನು ಓಡಿಸುತ್ತಿದ್ದಾರೆ. ನಾನೂ ಕೂಡ ಇದನ್ನು ನೋಡಿದ್ದೇನೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಇಂಟರ್ ಸ್ಟೇಟ್ ಪರ್ಮಿಟ್ ಇರುವವರು ಮಧ್ಯದಲ್ಲಿ ಪ್ರಯಾಣಿಕರನ್ನು ಪಿಕಪ್ ಮಾಡಬಾರದೆಂದು ಕಾನೂನು ಇದ್ದರೂ ಕೆಲವರು ಪಿಕಪ್ ಮಾಡಿಕೊಂಡು ಹೋಗುತ್ತಾರೆ. ಅಂಥವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸ್ವಾಮಿ, ಮಾನ್ಯ ಸದಸ್ಯರು ನನಗೆ ಸಪ್ಲಿಮೆಂಟ್ರಿಯಲ್ಲಿ ಮಾಹಿತಿ ಕೊಟ್ಟರೂ ಕ್ರಮ ತೆಗೆದುಕೊಳ್ಳುತ್ತೇನೆ. ಪರ್ಮಿಟ್ ಇಲ್ಲದೇ ಓಡಾಡುವಂಥ ಬಸ್ಸುಗಳು ಇರಬಹುದು. ಓಡುತ್ತಿರುವುದು ಸರ್ಕಾರದ ಗಮನಕ್ಕೂ ಬಂದಿದೆ. ಕೋಲಾರ ಪ್ಯಾಕೇಟ್‌ನಲ್ಲಿ ಇಂಟರ್‌ಸ್ಟೇಟ್ ಪರ್ಮಿಟ್ ಮೇಲೆ ಓಡತಕ್ಕ ಬಸ್ಸುಗಳು ಮಧ್ಯದಲ್ಲಿ ಪ್ರಯಾಣಿಕರನ್ನು ಪಿಕಪ್ ಮಾಡುವುದು ನನ್ನ ಗಮನಕ್ಕೆ ಬಂದಮೇಲೆ ಆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡು, ಆರ್. ಟಿ. ಓ ಮತ್ತು ಸೀನಿಯರ್ ಇನ್ಸ್‌ಪೆಕ್ಟರ್‌ರವರನ್ನು ಸಸ್ಪೆಂಡ್ ಮಾಡಿದ್ದೇನೆ ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಪತ್ತೆ ಮಾಡುವುದು ಬಹಳ ಕಷ್ಟದ ಕೆಲಸ. ಮಾನ್ಯ ಸದಸ್ಯರು ಕೂಡ ಸಹಕಾರ ಕೊಟ್ಟರೆ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ವಿಜಯನಗರ ಉಕ್ಕಿನ ಕಾರ್ಖಾನೆ ಬಗ್ಗೆ

೧೩೪೯. ಶ್ರೀ ಎಂ. ಎಸ್. ಕೃಷ್ಣಪ್ಪ (ರಾಜಾಜಿನಗರ).— ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ವಿಜಯನಗರ ಉಕ್ಕಿನ ಕಾರ್ಖಾನೆಯ ಸ್ಥಾಪನೆಯ ಬಗ್ಗೆ ಕೇಂದ್ರ ಸರ್ಕಾರ ಸ್ಥಾಪನೆ ಮಾಡಬೇಕಾಗಿಲ್ಲವೆಂಬ ಅಭಿಪ್ರಾಯಕ್ಕೆ ಬಂದಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಡ) ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡಲು ಎಷ್ಟು ಎಷ್ಟಾಗುತ್ತದೆ ಇದುವರೆವಿಗೂ ಎಷ್ಟು ಖರ್ಚಾಗಿದೆ ಹಾಗೂ ಕೇಂದ್ರ ಸರ್ಕಾರದವರು ಇದಕ್ಕಾಗಿ ಎಷ್ಟು ನಿಧಿ ಸಹಾಯ ಮಾಡಿದ್ದಾರೆ ?

(ಇ) ಈ ಉಕ್ಕಿನ ಕಾರ್ಖಾನೆ ಸ್ಥಾಪನೆಯಾಗಲು ರಾಜ್ಯ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಜೆ. ಹೆಚ್ ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು).—

(ಅ) ಇಲ್ಲ

(ಆ) ಮೊದಲನೇ ಹಂತಕ್ಕೆ ೪೫೦ ಕೋಟಿ. ಇಲ್ಲಿಯವರೆವಿಗೂ ೯ ಕೋಟಿ ರೂಪಾಯಿಗಳು ಖರ್ಚಾಗಿದೆ ಎಲ್ಲಾ ಖರ್ಚು ಕೇಂದ್ರ ಸರ್ಕಾರ ವಹಿಸಿಕೊಳ್ಳುತ್ತದೆ.

(ಇ) ಸಂಪೂರ್ಣ ಕಾರ್ಯವನ್ನು ಕೇಂದ್ರ ಸರ್ಕಾರ ಮಾಡಬೇಕಾಗಿದೆ, ಅಗತ್ಯವಾದ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ರಾಜ್ಯ ಸರ್ಕಾರ ಬೇಕಾಗುವ ನೀರು ಹಾಗೂ ವಿದ್ಯುತ್ ಪೂರೈಕೆಯನ್ನು ಸರಬರಾಜು ಮಾಡುವ ಬಗ್ಗೆ ಭರವಸೆಯನ್ನು ನೀಡಿದೆ

ಶ್ರೀ ಎಂ. ಎಸ್ ಕೃಷ್ಣನ್.—ಸ್ವಾಮಿ, ಕಳೆದ ೧೪ ವರ್ಷಗಳಿಂದ ಪರಿಸ್ಥಿತಿಗೆ ಹೀಗೆ ಉತ್ತರ ಕೊಂಡು ಬಂದಿದೆ. ಆಡಿಗಲ್ಲು ಹಾಕಿ ೧೪ ವರ್ಷವಾಯಿತು. ಇಪತ್ತು ಕೇಂದ್ರ ಸರ್ಕಾರದವರು ಸ್ಥಾಪನೆ ಮಾಡಬೇಕಾಗಿಲ್ಲ, ಎನ್ನುವಂಥ ಅಭಿಪ್ರಾಯ ಬಂದಿದೆ, ಈ ವರ್ಷವಾದರೂ ಬಜೆಟ್ಟಿನಲ್ಲಿ ಕೇಂದ್ರ ಸರ್ಕಾರ ಹಣ ಇಟ್ಟಿದೆಯೆ ? ಏನೇ ಪಂಚವಾರ್ಷಿಕ ಯೋಜನೆಯಲ್ಲಿ ಏನಾದರೂ ಹಣ ಒದಗಿಸಲಾಗಿದೆಯೆ ?

ಶ್ರೀ ಜೆ ಹೆಚ್. ಪಟೇಲ್.— ಸ್ವಾಮಿ, ಕೇಂದ್ರ ಸರ್ಕಾರದವರ ಹೇಳಿಕೆಯನ್ನು ನಾನು ಗಮನಿಸಿದ್ದೇನೆ. ಅಧಿಕೃತವಾಗಿ ನಮ್ಮ ಸರ್ಕಾರಕ್ಕೆ ಏನೂ ಬಂದಿಲ್ಲ. ಮಾನ್ಯ ಸದಸ್ಯರು ಸಂಶಯಪಡುವುದಕ್ಕೆ ಅವಕಾಶ ಇದೆ. ಏನೇ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಎಲ್ಲೂ ಹಣ ಇಟ್ಟಿಲ್ಲ. ಆದರೂ ನಾನು ಖುದ್ದಾಗಿ ಉಕ್ಕಿನ ಮಂತ್ರಿಗಳಿಂದ ಪಂಥ್‌ರವರನ್ನು ನೋಡಿ ಮಾತನಾಡಿದಂಥ ಸಂದರ್ಭದಲ್ಲಿ ಈ ವರ್ಷ ರಾಷ್ಟ್ರದಲ್ಲಿ ಹೊಸ ಕಾರ್ಖಾನೆಗಳಿಗಾಗಿ ೧೦ ಕೋಟಿ ರೂಪಾಯಿಗಳನ್ನು ಪ್ರೊವೈಡ್ ಮಾಡಲಾಗಿದೆಯೆಂದು ಹೇಳಿದ್ದರು, ಆದರೆ ಕೈಬಿಟ್ಟಿದ್ದೇವೆಂದು ಹೇಳಿರಲಿಲ್ಲ. ಈ ಯೋಜನೆ ಕಾರ್ಯಗತವಾಗುತ್ತದೆಂದು ನಂಬುವುದಕ್ಕೆ ಆಗುವಷ್ಟು ಹಣವನ್ನು ಒದಗಿಸಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಈ ವರ್ಷ ೧೦ ಕೋಟಿಯಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆಗೆ ಎಷ್ಟು ಹಣ ಇಟ್ಟಿದ್ದಾರೆ ? ೪೫೦ ಕೋಟಿ ಮೊದಲನೇ ಹಂತಕ್ಕೆ ಎಂದು ಹೇಳಿದ್ದೀರಿ. ಇದು ಯಾವ ವರ್ಷದ ಅಂದಾಜು ? ಇಂದಿನ ಅಂದಾಜು ಎಷ್ಟಾಗಿದೆ. ಎಷ್ಟು ಹಂತದಲ್ಲಿ ಇದನ್ನು ಪೂರೈಸುವುದಕ್ಕೆ ಏರ್ಪಾಡು ಮಾಡಿದ್ದೀರಿ ?

ಶ್ರೀ ಜೆ. ಹೆಚ್. ಪಟೇಲ್ —ಮಾನ್ಯ ಅಧ್ಯಕ್ಷರೇ ರಾಜ್ಯ ಸರ್ಕಾರಕ್ಕೆ ಮತ್ತು ಈ ಸದನಕ್ಕೆ ಮಾನ್ಯ ಸದಸ್ಯರ ಕಳಕಳಿ ಏನೆಂಬುದು ಗೊತ್ತಿದೆ. ವಿಜಯನಗರದ ಉಕ್ಕಿನ ಕಾರ್ಖಾನೆಯನ್ನು ಇಡೀ ರಾಜ್ಯದ ಜನತೆ ಕೇಳುತ್ತಿದ್ದಾರೆ. ಕೇಂದ್ರ ಸರ್ಕಾರದ ನೀತಿಯಲ್ಲಿ ಮತ್ತು ವಿಚಾರದಲ್ಲಿ ಬದಲಾವಣೆಯಾಗಿದೆ. ಹಿಂದೆ ೧೯೮೪ನೇ ಇಸವಿಯ ಪ್ರೊಸೆಸ್ ಇಟ್ಟುಕೊಂಡು ೬೧೫೦ ಕೋಟಿ ಬೇಕಾಗುತ್ತದೆಂದೂ, ಇದರಿಂದ ೩ ಮಿಲಿಯನ್ ಟನ್ ಕೆಪ್ಯಾಸಿಟಿ ಮಾಡುವುದಕ್ಕಾಗುತ್ತದೆಂದು ನಿರ್ಧರಿಸಲಾಗಿತ್ತು. ಇದನ್ನು ಪರಿಷ್ಕರಿಸಿ ೫ ಲಕ್ಷ ಟನ್ ಸ್ಟ್ಯಾಂಜ ಐರನ್ ಮಾಡಲಾಗುವುದೆಂದೂ, ಸ್ಟ್ಯಾಂಜ ಐರನ್ ಟೆಕ್ನಾಲಜಿ ಮೂಲಕ ಮಾಡುತ್ತೇವೆಂದು ಹೇಳಿಕೊಟ್ಟಿದ್ದರೂ ನಮಗೆ ಅಧಿಕೃತವಾಗಿ ಬಂದಿಲ್ಲ. ಕೇಂದ್ರ ಸರ್ಕಾರದ ವಿಚಾರದಲ್ಲಿ ಕೈಬಿಡುವ ವಿಚಾರ ಇಲ್ಲದೇ ಇರುವುದರಿಂದ ರಾಜ್ಯ ಸರ್ಕಾರ ಪುನಃ ಪುನಃ ಬೇಡಿಕೆಯನ್ನು ಇಟ್ಟಿದೆ. ಈ ವರ್ಷದ ಬಜೆಟ್ಟಿನಲ್ಲಿ ಎಷ್ಟು ಪ್ರೊವೈಡ್ ಮಾಡಿದ್ದಾರೆನ್ನುವುದು ಗೊತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಈಗತಾನೇ ಮಾತನಾಡುತ್ತಾ ಪುನಃ ಪುನಃ ಒತ್ತಾಯ ಮಾಡುತ್ತಿದ್ದೇವೆಂದು ಮಾನ್ಯ ಮಂತ್ರಿಯವರು ಹೇಳಿದರು. ಮೂರು ಮಿಲಿಯನ್ ಟನ್‌ನಿಂದ ೫ ಮಿಲಿಯನ್ ಟನ್‌ಗೆ ತಿಳಿಸಿದ್ದಾರೆ. ಸ್ಟ್ಯಾಂಜ್ ಐರನ್ ಗುಣಮಟ್ಟ ಕೂಡ ಕಡಿಮೆಯಾಗುತ್ತದೆ. ಏನೇ ಪಂಚವಾರ್ಷಿಕ ಯೋಜನೆಯಲ್ಲಿ ಹಣ ಇಟ್ಟಿರುವುದು ಗೊತ್ತಿಲ್ಲ. ಇಂಥ ಗಂಭೀರವಾದಂಥ

ಪರಿಸ್ಥಿತಿ ಇರುವಾಗ ಪರಿಣಾಮಕಾರಿಯಾಗಿ ಒತ್ತಾಯ ತರುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದಿರಿ ? ಮಾನ್ಯ ಮುಖ್ಯ ಮಂತ್ರಿಯವರು ಹಿಂದೆ ಈ ಮನೆಯಲ್ಲಿ ಮತ್ತು ಹೊರಗಡೆ ಸಹಸ್ರ ಜನರ ಹೋರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡಿ, ಈ ಮನೆಯ ಸದಸ್ಯರ ನಿಯೋಗವನ್ನು ಕರೆದುಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.---ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಮಾನ್ಯ ಮಂತ್ರಿಯವರು ಪ್ರಧಾನ ಮಂತ್ರಿಯವರ ಜೊತೆ ಮಾತನಾಡಿದ್ದಾರೆ. ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಸಂಬಂಧಪಟ್ಟ ಮಂತ್ರಿಗಳ ಜೊತೆ ಮಾತುಕತೆ ನಡೆಸಿದ್ದೇವೆ ಅವರ ಮಾತಿನ ಅರ್ಥ ಏನು ? ಹಣಕಾಸಿನ ಸ್ಥಿತಿಯಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಮಾಡತಕ್ಕ ಸಂಭವ ಇಲ್ಲ ಎನ್ನುವಂಥ ಮಾತನ್ನು ಹೇಳಿದ್ದಾರೆ. ಸರ್ಕಾರ ಮತ್ತು ಇಡೀ ಸದನ ಈ ವಿಚಾರದಲ್ಲಿ ಒಂದು ನಿರ್ಣಯ ಮಾಡಿ ಕಳುಹಿಸುವುದಾದರೆ ನನ್ನ ಅಭ್ಯಂತರ ಇಲ್ಲ. ಹಣಕಾಸಿನ ಸ್ಥಿತಿಯಲ್ಲಿ ಕೇಂದ್ರ ಸರ್ಕಾರ ತೀರ್ಮಾನ ತೆಗೆದುಕೊಳ್ಳತಕ್ಕ ಸ್ಥಿತಿಯಲ್ಲಿ ಇಲ್ಲ.

ಶ್ರೀ ಎಂ. ಆರ್. ಲಕ್ಷ್ಮಯ್ಯ. — ಈ ಯೋಜನೆಯನ್ನು ಪ್ರಾರಂಭ ಮಾಡುವುದಕ್ಕೆ ಇರುವಂತಹ ವಿವಾದವೇನೆಂದರೆ ಇಂದಿರಾಗಾಂಧಿಯವರ ಹೆಸರಿನಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆಯಾಗಬೇಕೆಂಬ ವಿವಾದ ಕೇಳಿಬರುತ್ತದೆ. ಇದರಿಂದಾಗಿಯೇ ಬಹಳಕಾಲದಿಂದ ನೆನೆಗುದಿಯಲ್ಲಿ ಬಿದ್ದಿದೆ. ಆದ್ದರಿಂದ ಅವರ ಹೆಸರಿನಲ್ಲೇ ಈ ಒಂದು ಕಾರ್ಖಾನೆಯನ್ನು ತೆರೆಯುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ ?

ಶ್ರೀ ಜೆ. ಹೆಚ್ ಪಟೇಲ್. — ಹೆಸರನ್ನು ಬದಲಾವಣೆ ಮಾಡುವ ವಿಷಯವನ್ನೇ ಕೇಂದ್ರ ಸರ್ಕಾರ ಪ್ರಸ್ತಾಪಿಸಿಲ್ಲ. ಆದಕ್ಕೆ ಸರ್ಕಾರವೂ ಕೂಡ ಒಪ್ಪಿಲ್ಲ.

ಶ್ರೀ ಪಂಪಾಪತಿ. —ನಮ್ಮ ಪಕ್ಷದ ನಾಯಕರಾದ ಶ್ರೀಮಾನ್ ಕೃಷ್ಣನ್‌ರವರು ಹೇಳಿದ ಹಾಗೆ ಎಲ್ಲ ಪಕ್ಷದ ಸದಸ್ಯರ ನಿಯೋಗವೊಂದನ್ನು ದೆಹಲಿಗೆ ಕರೆದೊಯ್ಯುತ್ತೇನೆಂದು ಈ ಹಿಂದೆಯೇ ಹೇಳಿದ್ದರು. ಇದರ ಬಗ್ಗೆ ನೀವು ಯಾವ ರೀತಿಯ ಹೋರಾಟ ಮಾಡಿದರೂ ಅದಕ್ಕೆ ನಮ್ಮ ಬೆಂಬಲವಿದೆ. ಆ ರೀತಿಯ ಹೋರಾಟವನ್ನು ತಮ್ಮ ನಾಯಕತ್ವದಲ್ಲಿ ಮಾಡಿ, ಇದರಲ್ಲಿ ಕನ್ನಡಿಗರ ಪ್ರಶ್ನೆ ಇದೆ, ನಿರುದ್ಯೋಗಿಗಳ ಪ್ರಶ್ನೆ ಇದೆ ಯುವಕರ ಪ್ರಶ್ನೆ ಇದೆ ಕೇಂದ್ರ ಸರ್ಕಾರವನ್ನು ಕೇಳುತ್ತಾ ಕುಳಿತುಕೊಳ್ಳುವುದಕ್ಕಾಗುವುದಿಲ್ಲ ಹೋರಾಟ ಮಾಡುವ ಸಲುವಾಗಿ ಯಾವ ರೀತಿಯ ಕಾರ್ಯಕ್ರಮವನ್ನು ರೂಪಿಸುತ್ತೀರೆಂದು ದಯಮಾಡಿ ತಿಳಿಸಿ. ಅದಕ್ಕೆ ನಮ್ಮ ಬೆಂಬಲ ಇದೆ.

ಶ್ರೀ ಜೆ. ಹೆಚ್. ಪಟೇಲ್. — ಇದಕ್ಕಾಗಿ ಹೋರಾಟ ಮಾಡಬೇಕಾದ ಅವಶ್ಯಕತೆ ಇಲ್ಲ. ಕೇಂದ್ರ ಸರ್ಕಾರದ ಮೇಲೆ ಎಲ್ಲರೂ ಸೇರಿ ಇಡೀ ರಾಜ್ಯದ ಹಿತದೃಷ್ಟಿಯಿಂದ ಎಲ್ಲ ಪಕ್ಷಗಳೂ ಸೇರಿ ಒತ್ತಾಯವನ್ನು ತರುವಂತಹ ಕೆಲಸವನ್ನು ಮಾಡಬೇಕು. ಆದರೆ ಮಾನ್ಯ ಸದಸ್ಯರು ಹೋರಾಟ ಮಾಡುವುದಾದರೆ ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಯು. ಭೂಪತಿ. — ಈ ಕಾರ್ಖಾನೆಯನ್ನು ಪ್ರಾರಂಭ ಮಾಡುವ ಸಲುವಾಗಿ ಮತ್ತು ಇನ್‌ಫ್ರಾಸ್ಟ್ರಕ್ಚರನ್ನು ಒದಗಿಸಿಕೊಳ್ಳುವ ಸಲುವಾಗಿ ನಂದಿಹಳ್ಳಿಯ ಹತ್ತಿರ ಪಿ. ಡಿ. ಸೆಂಟರ್‌ನ್ನು ಪ್ರಾರಂಭ ಮಾಡಿ, ಕಾರ್ಖಾನೆಗೆ ಬೇಕಾದಂತಹ ತಜ್ಞರನ್ನು ತಯಾರು ಮಾಡಬೇಕೆಂದು ಯೋಜನೆಯನ್ನು ಮಾಡಿದ್ದರ ಮೇರೆ ಈಗಾಗಲೇ ೪-೫ ಬ್ಯಾಚ್ ಆ ಒಂದು ತರಬೇತಿಯಲ್ಲಿ ಉತ್ತೀರ್ಣರಾಗಿ ಹೊರಗೆ ಬಂದಿದ್ದಾರೆ. ಇದಕ್ಕೋಸ್ಕರ ಭೂಮಿಯನ್ನು ಕೂಡ ಖರೀದಿ ಮಾಡಿದ್ದಾರೆ. ಇದಕ್ಕೆ ಬೇಕಾದಂತಹ ವಿದ್ಯುತ್ ಹಾಗೂ ನೀರನ್ನು ರಾಜ್ಯ ಸರ್ಕಾರ ಒದಗಿಸುವುದಾದರೆ ಪ್ರಾರಂಭ ಮಾಡುತ್ತೇವೆಂದು ಕೇಂದ್ರ ಸರ್ಕಾರದವರು ತಿಳಿಸಿದರು, ಅದಕ್ಕೆ ಉತ್ತರವಾಗಿ ಈ ಮನೆಯಲ್ಲೇ ಮಾನ್ಯ ಮುಖ್ಯಮಂತ್ರಿಗಳು ಮನೆ ಮನೆಗೂ ವಿದ್ಯುತ್ತನ್ನು ಕಡಿಮೆ ಮಾಡಿ ವಿದ್ಯುತ್ತನ್ನು ಈ ಕಾರ್ಖಾನೆಗೆ ಪೂರೈಸುತ್ತೇವೆ ಎನ್ನುವ ಮಾತನ್ನು ಹೇಳಿದರು, ಆದರ ನಂತರ.....

ಅಧ್ಯಕ್ಷರು.— ಆದರ ನಂತರ, ಇದರ ನಂತರ ಎಂಬುದಾಗಿ ಚರ್ಚೆ ಮಾಡುತ್ತಿದ್ದೀರಲ್ಲಾ ನೇರವಾಗಿ ಪ್ರಶ್ನೆಯನ್ನು ಕೇಳಿ.

ಶ್ರೀ ಯು. ಭೂಪತಿ.— ತಾವು ಸ್ವಲ್ಪ ದಯವಹಾತಿ ಕೇಳಿ. ತಾವ್ಯಾಕೆ ಆ ರೀತಿ ಮಾಡಂತ್ತೀರಿ? ಆಗ ಆ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಇದರ ಸಲುವಾಗಿ ಕರ್ನಾಟಕವನ್ನೇ ಬಂದ್ ಮಾಡುತ್ತೇವೆಂಬ ಬಹಿರಂಗ ಆಶ್ವಾಸನೆಯನ್ನು ಕೊಟ್ಟಿದ್ದರು ಆದು ಏನಾಯಿತು ಎಂಬುದಾಗಿ ಕೇಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.— ಈ ಬಗ್ಗೆ ಬಂದ್ ಮಾಡುವ ಅವಶ್ಯಕತೆ ಇಲ್ಲ. ಬಂದ್ ಮಾಡಿ ವುದರಿಂದ ಇದು ಆಗುವ ಕೆಲಸವು ಅಲ್ಲ. ವಿದ್ಯುತ್ ಬಗ್ಗೆ ಮಾನ್ಯ ಸದಸ್ಯರು ಏನು ಕೇಳಿದ್ದಾರೆ, ಆ ಮಾತನ್ನು ಸರ್ಕಾರ ಈಗಲೂ ಪುನರುಚ್ಚಿಸುತ್ತದೆ. ಅವರು ಯಾವಾಗಲೇ ಆದರೂ ಈ ಕಾರ್ಖಾನೆ ಯನ್ನು ಪ್ರಾರಂಭ ಮಾಡುತ್ತೇವೆಂದರೆ, ಅದಕ್ಕೆ ಬೇಕಾಗುವ ವಿದ್ಯುತ್ತನ್ನು ಪೂರೈಕೆ ಮಾಡುತ್ತೇವೆಂಬ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಬಿ. ಎಂ. ಆಡ್ಕಂತಾಯ.— ಕುದುರೆಮುಖ ಕಾರ್ಖಾನೆಗೆ ವಿದ್ಯುತ್ತನ್ನು ಪೂರೈಸುವ ಬಗ್ಗೆ ತಾವು ಏನು ಆಶ್ವಾಸನೆಯನ್ನು ಕೊಟ್ಟಿದ್ದಿರಲ್ಲ, ಆದರಲ್ಲಿ ಏನು ಮಾಡಿದ್ದೀರಿ ಎಂಬುದನ್ನು ಹೇಳಂತ್ತೀರಾ

ಶ್ರೀ ಜೆ. ಹೆಚ್. ಪಟೇಲ್.— ಈ ತರಹದ ಪ್ರಶ್ನೆಯನ್ನು ಕೇಳುವುದಕ್ಕೆ ತಾವು ಆಲೋ ಮಾಡಬಾರದು.

ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ಸ್‌ಗಳ ಆಯ್ಕೆ ಆಗಿದ್ದರೂ ನೇಮಕ ಮಾಡದೆ ಇರಲು ಕಾರಣವೇನು

೧೩೧೩. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).— ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಹಾಯಕ ಸರ್ಕಾರಿ ಅಭಿಯೋಜಕರುಗಳನ್ನು ಆಯ್ಕೆಯಾಗಿದ್ದರೂ ಕೆಲಸಕ್ಕೆ ಹಾಜರಾಗಲು ಆದೇಶ ನೀಡದೆ ಇರಲು ಕಾರಣವೇನು ಹಾಗೂ ಯಾವಾಗ ಇವರಿಗೆ ಕೆಲಸಕ್ಕೆ ಹಾಜರಾಗಲು ಆದೇಶ ನೀಡಲಾಗುವುದು

ಶ್ರೀ. ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಈಗಾಗಲೇ ದಿನಾಂಕ ೨೦-೨-೧೯೮೬ ರಂದು ನೇಮಕ ಹಾಗೂ ತೈನಾತಿ ಆದೇಶಗಳನ್ನು ಹೊರಡಿಸಲಾಗಿದೆ.

ಶ್ರೀ ಬಿ. ಜಿ. ಕೊಟ್ರಪ್ಪ.— ಅದಕ್ಕಾಗಿ ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ.

ರಾಜ್ಯದಲ್ಲಿ ರಾಜ್ಯ ರಸ್ತೆ ಸಾರಿಗೆ ಬಸ್ ನಿಲ್ದಾಣಗಳಲ್ಲಿ ಸರಿಯಾದ ವ್ಯವಸ್ಥೆ ಇಲ್ಲದಿರುವುದು

೧೪೯೯. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ) — ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿನ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಗಳ ಕಟ್ಟಡದಿಂದ ಬರುವ ಆದಾಯ ಎಷ್ಟು ?

ಆ) ಬಹುತೇಕ ಬಸ್ ನಿಲ್ದಾಣಗಳಲ್ಲಿ ಶೌಚಗೃಹಗಳು ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಇ) ಬಂದಿದ್ದಲ್ಲಿ ಆ ಬಗ್ಗೆ ಕೈಗೊಂಡಿರುವ ಕ್ರಮಗಳೇನು ?

ಈ) ಮೈಸೂರು ನಗರದ ಬಸ್ ನಿಲ್ದಾಣದ ಕಟ್ಟಡ ಬಿರುಕು ಬಿಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಉ) ಬಂದಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು ?

ಊ) ಈ ನಿಲ್ದಾಣದಲ್ಲಿ ಪದೇ ಪದೇ ದುರಸ್ತಿ ಕೆಲಸ ಮಾಡಂತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಋ) ಈ ಕೆಲಸವನ್ನು ಯಾವಾಗ ಪೂರ್ಣಗೊಳಿಸಲಾಗುವುದು ?